ಈಗ ನೋಡು... ಆ ದೇವರಿಗೆ ಕಣ್ಣಿಲ್ಲ... ಸುಂದರವಾಗಿದ್ದರೆ ಇಂಥದ್ದು ಏನನ್ನಾದರೂ ಮಾಡಿ ಹಾಳು ಮಾಡಿ ಬಿಡುತ್ತಾನೆ... ಈ ಜಗತ್ತಿನಲ್ಲಿ ಮುಂದೆ ಬರಬೇಕು ಅಂದರೆ ಎಷ್ಟು ಕಷ್ಟವೋ...' ಎಂದೆಲ್ಲ ಅವರು ಗೊಣಗುತ್ತ ಮುಂದೆ ನಡೆಯುತ್ತಿದ್ದರೆ ನಾನು ಅವರ ಹಿಂದೆ... ಊರ ಜನರೆಲ್ಲ ನಮ್ಮನ್ನೇ ಮಿಕ ಮಿಕ ನೋಡತೊಡಗಿದರು. ಆಚಾರಿ ಮನೆ ದಾಟಿ, ಮುನಿಸ್ವಾಮಿ ಮನೆ ಮುಂದಿಂದ ಹೋಗುತ್ತಿರುವಾಗ ರಾಮಿಯ ತಾಯಿ ಹೊರಗೆ ನಿಂತಿದ್ದವರು 'ಪಳ್ನಿ ಮಾದರಿ ಇರ್ ಕ್ಕಾಳೇ...' ಅಂದದ್ದು ಕೇಳಿ ಕೆಲವರ ಕಿವಿ ನಿಮಿರಿತು. ನಾನು ಟೀಚರ್ ಹಿಂದೆ ನನ್ನ ಸೀರೆ ಸಾವರಿಸಿಕೊಂಡು ಓಡುತ್ತಿರುವಾಗ ನನ್ನ ಹಿಂದೆ ಒಂದು ಹಿಂಡೇ ಬರುತ್ತಿದೆ ಎಂಬುವುದು ತಿಳಿಯಲಿಲ್ಲ. 'ನಾಟ್ಯ ವಾದ್ಯಾರ್ ಇಷ್ಟು ಜೋರಾಗಿ ನಡೆಯುತ್ತಿದ್ದಾರೆ ಎಂದರೆ ಏನೋ ವಿಶೇಷವೇ ಇರಬೇಕು' ಎಂದು ಹುಡುಗರು, ಹೆಂಗಸರು ನಮ್ಮ ಹಿಂದೆ. ನಮ್ಮ ಮನೆಯ ಮೆಟ್ಟಿಲು ಏರಿ ಜಗುಲಿ ದಾಟಿ ಒಳಗೆ ಹೋದರು ಟೀಚರ್. ನಾನು ಮೆಟ್ಟಿಲನ್ನು ಕೂಡ ಹತ್ತದೇ ಅಲ್ಲೇ ನಿಂತೆ. ಅಮ್ಮ, ಅತ್ತಿಗೆ ಬೆಳಗಿನ ತಿಂಡಿ ತಯಾರಿಯಲ್ಲಿದ್ದರು. ಅಪ್ಪ ಸ್ನಾನ ಮುಗಿಸಿ ದೇವರ ಮನೆ ಸೇರಿದ್ದರು. ಅಣ್ಣ ಯಾವುದೋ ಕಡತ ನೋಡುತ್ತಿದ್ದ. ಟೀಚರ್‌ನ ಕಂಡು, 'ಬನ್ನಿ ಬನ್ನಿ' ಎಂದು ಸ್ವಾಗತಿಸಿದ ಅಣ್ಣ. ಅಮ್ಮನನ್ನು ಮತ್ತು ಅತ್ತಿಗೆಯನ್ನು ಕೂಗಿದ. 'ಏನು ವಿಶೇಷ' ಎಂದು ಕೇಳಿ ಕುಳಿತುಕೊಳ್ಳಲು ಹೇಳಿದರು. ಟೀಚರ್ ಬಾಗಿಲಿನಿಂದ ಹಿಂತಿರುಗಿ ನೋಡಿದರು. 'ಏ ಅಂಗೆಯೇ ನಿಕ್ಕರೆ... ವಾ ಉಳ್ಳೆ...(ಅಲ್ಲೇ ಯಾಕೆ ನಿಂತಿದ್ದೀಯ. ಬಾ ಒಳಗೆ)' ಕರೆದರು. ನಾನು ಹಿಂಜರಿಯುತ್ತಲೇ ಹೋದೆ ನನ್ನ ಮನೆಯೊಳಗೆ! ಬಾಗಿಲ ಬಳಿ ಕುಳಿತೆ. ಅಲ್ಲಿದ್ದ ಕಂಬಗಳನ್ನು ಹಿಡಿದು ಆಡುತ್ತಾ... ಅಡುಗೆ ಮನೆ, ದೇವರ ಮನೆ ಎಲ್ಲ ಕಡೆ ಓಡಾಡುತ್ತಿದ್ದ ಪಳ್ನಿ... ಈಗ ಬಾಗಿಲ ಒಳಗೆ ಹೋಗಲು ಹಿಂಜರಿಯುತ್ತಿದ್ದಾಳೆ! ಟೀಚರ್ ಕೇಳಿದರು: 'ನಿಮಗೆ ಯಾರಿಗೂ ನಿಮ್ಮ ಮಗಳ ಗುರುತು ಗೊತ್ತಿಲ್ಲವೇ? ಸಿಗಲಿಲ್ಲವೇ? ಅಥವಾ ಬೇಡವೇ?' ಅಮ್ಮ ಬಂದರು ನನ್ನ ಹತ್ತಿರ. 'ಪಳ್ನೀ...' ಬೆನ್ನು ಸವರಿದರು. ನಾನು ಈಗ ಚೆಂದಿ ಉಟ್ಟಿರಲಿಲ್ಲವಲ್ಲ... ಅತ್ತಿಗೆ ದೂರದಿಂದಲೇ ನೋಡುತ್ತಿದ್ದಳು. ಅದೇನು ಭಾವವೋ. ಅಪ್ಪ ಎದ್ದು ಬಂದರು. 'ಪಳ್ನಿದಾ...' ಹೌದು ಅನ್ನುವುದು ಹೇಗೆ? ಅಣ್ಣ ಹೇಳಿದ: 'ಅವಳು ಸತ್ತು ಹೋದಳು ಎಂದು ಭಾವಿಸಿದ್ದಾಗಿದೆ. ಈಗ ಹೀಗೆಲ್ಲಾ ಬಂದರೆ ಹೇಗೆ ಸೇರಿಸುವುದು?' ನಿರ್ವಿಕಾರವಾಗಿದ್ದ ಅಣ್ಣ. ಅವನಿಗೆ ಎಲ್ಲವೂ ಮರೆತೇ ಹೋಯಿತೇನೋ... ಅವನು ಮಾವಿನ ಕಾಯಿ ಕದ್ದಾಗೆಲ್ಲ ಕಾಯುತ್ತಿದ್ದುದು ನಾನೇ, ಬಳಪ ಕಳೆದುಕೊಂಡು ಬಂದಾಗೆಲ್ಲ ನನ್ನ ಬಳಪ ಕೊಟ್ಟು ನನ್ನದು ಕಳೆಯಿತು ಅನ್ನುತ್ತಿದ್ದೆನಲ್ಲ... ಉಂಡಾಡಿಯಾಗುತ್ತಿದ್ದಾನೆ ಎಂದು ಅಪ್ಪ ಬೈಯುವಾಗೆಲ್ಲ ನನ್ನ ಪ್ರೀತಿಯ ಅಣ್ಣನನ್ನು ಯಾರೂ ಬೈಯಬಾರದು ಎಂದು ತಾಕೀತು ಮಾಡುತ್ತ ತಲೆಹರಟೆ ಅನ್ನಿಸಿಕೊಳ್ಳುತ್ತಿದ್ದೆನಲ್ಲ... ಬಹುಶಃ ನನಗೆ ನೆನಪಿರುವುದೆಲ್ಲ ಅವನಿಗೆ ಮರೆತುಹೋಗಿರಬೇಕು. ನನಗೂ ಹಾಗೆಯೇ ಎಷ್ಟೋ ಮರೆವುಗಳು ಅಲ್ಲವೇ! ನನ್ನ ಯೋಚನೆಗಳು ಹರಿಯುವಂತೆ ಅವನ ದನಿ ಕೇಳಿತು 'ಏನೇ ಆಗಲಿ... ಅವಳು ಪಳ್ನಿಯೇ ಆದರೂ ಸರಿ... ಮನೆಗೆ ಸೇರಿಸಲು ಸಾಧ್ಯವಿಲ್ಲ... ನಮ್ಮ ಸಂಪ್ರದಾಯ ಬಿಟ್ಟು ಇವಳನ್ನು ಹೇಗೆ ಸೇರಿಸಿಕೊಳ್ಳುವುದು?' ಅಷ್ಟರಲ್ಲಿ ಅತ್ತಿಗೆ ಅವನನ್ನು ಕರೆದಳು. ಏನೋ ಹೇಳಿದಳು. ಅವನು ಮುಂದುವರಿಸಿದ, 'ಬೇಕಿದ್ದರೆ ಕೆಲಸ ಮಾಡಿಕೊಂಡು ಆ ಜಗುಲಿಯ ರೂಮಿನಲ್ಲಿ ಇರಲಿ. ಮನೆ ಮಗಳಂತೆ ಇರಿಸಿಕೊಳ್ಳುವುದು ಮಾತ್ರ ಸಾಧ್ಯ ಇಲ್ಲ'.

ಅಪ್ಪ ಹೇಳಿದರು, 'ಪಳ್ನೀ... ನೀನು ಏನು ಹೇಳ್ತೀಯ?' ಮೊತ್ತ ಮೊದಲ ಬಾರಿಗೆ ಅಪ್ಪ ನನ್ನ